ಓ.ಎಸ್.ನಂ.62/2014
ಪಿ.ಡಬ್ಲ್ಯೂ. 1

ಸಾಕ್ಷಿಯನ್ನು ಪುನಃ ಕರೆಸಿ ಪ್ರಮಾಣೀಕರಿಸಲಾಯಿತು. ದಿ ಃ 08.11.2016.
ಮುಂದುವರಿದ ಪಾಟೀ ಸವಾಲು ಃ ಶ್ರೀ. ಸಿ ಎಸ್ ಎ ಃ ವಕೀಲರಿಂದ ಃ-

ಟ್ವಿಂಕಲ್ ಟೈಲರ್ಸ್ ವ್ಯವಹಾರ ಮಾಡುತ್ತಿದ್ದೆ ಎಂದರೆ ಸರಿ. ಸಾಕ್ಷಿಯು ಮುಂದುವರಿದು ಈಗ ನನ್ನ ಆರೋಗ್ಯ ಸರಿ ಇಲ್ಲದೇ ಇರುವುದರಿಂದ ಮಾಡುತ್ತಿಲ್ಲ ಎಂದು ನುಡಿಯುತ್ತಾರೆ. ನಾನು ಈಗ ಲಕ್ಷ್ಮೀ ಟೈಲರಿಂಗ್ ಸೆಂಟರ್ ನಡೆಸುತ್ತಿದ್ದೇನೆಂದರೆ ಸರಿಯಲ್ಲ. ಲಕ್ಷ್ಮೀ ಟೈಲರಿಂಗ್ ಸೆಂಟರ್ ನಮ್ಮ ಊರಿನಲ್ಲಿ ಇದೆ ಎಂದರೆ ನನಗೆ ಗೊತ್ತಿಲ್ಲ. ಅದರ ಮಾಲೀಕರು ಯಾರು ಎಂದರೆ ನನಗೆ ಗೊತ್ತಿಲ್ಲ.

ಚೇಳೂರಿನಲ್ಲಿ ಶ್ರೀರಂಗ ಟ್ರೇಡರ್ಸ್ ಎನ್ನುವ ಬಟ್ಟೆ ಅಂಗಡಿ ಇರುತ್ತದೆ. ಅದನ್ನು 2ನೇ ಪ್ರತಿವಾದಿ ಮೋಹನ್‌ರಾವ್ ರವರು ನಡೆಸುತ್ತಿದ್ದಾರೆಂದರೆ ನನಗೆ ಗೊತ್ತಿಲ್ಲ. ದಾವಾ ಐಟಂ ನಂ.2 ಮತ್ತು 3 ರಲ್ಲಿ ಶ್ರೀರಂಗ ಟ್ರೇಡರ್ಸ್ ಎನ್ನುವ ಬಟ್ಟೆ ಅಂಗಡಿಯನ್ನು ಮೋಹನ್ ರಾವ್ ರವರು ನಡೆಸುತ್ತಿದ್ದಾರೆಂದರೆ ಯಾವ ಆಸ್ತಿಯಲ್ಲಿ ನಡೆಸುತ್ತಿದ್ದಾರೆಂದು ನನಗೆ ಗೊತ್ತಿಲ್ಲ ಎಂದು ನುಡಿಯುತ್ತಾರೆ. ದಾವಾ ಐಟಂ ನಂ.1 ಅದರ ಖಾತಾ ನಂ.369 ಇದ್ದು ಅದರಲ್ಲಿ 5 ಸಣ್ಣ ಮನೆಗಳು ಇರುತ್ತವೆ. ದಾವಾ ಐಟಂ ನಂ.1 ನ್ನು ಲಕ್ಷ್ಮೀಬಾಯಿ ಮತ್ತು ಶೋಭ ರವರು ದಿನಾಂಕಃ-31.01.2009 ರಂದು ಖರೀದಿಸಿದ್ದಾರೆಂದರೆ ಸಾಕ್ಷಿಯು ಖರೀದಿಸಿರುವುದು ನಿಜ ಆದರೇ ನನಗೆ ಗೊತ್ತಿಲ್ಲದ್ದಂತೆ ಅವರ ಹೆಸರಿಗೆ ಮಾಡಿಕೊಂಡಿದ್ದಾರೆಂದು ನುಡಿಯುತ್ತಾರೆ. ಕೃಷ್ಣೋಜಿರಾವ್ ರವರಿಂದ ಲಕ್ಷ್ಮೀಬಾಯಿ ಮತ್ತು ಶೋಭ ಖರೀದಿ ಮಾಡಿದ್ದಾರೆ.

ಲಕ್ಷ್ಮೀಬಾಯಿ ಮತ್ತು ಶೋಭ ರವರಿಗೆ ಅವರ ತವರು ಮನೆಯವರು ಅರಿಶಿನ-ಕುಂಕುಮಕ್ಕೆಂದು ಕೊಡಿಸಿದಂತಹ ಆಸ್ತಿಯಾಗಿರುತ್ತದೆ ಎಂದರೆ ಸುಳ್ಳು. ನಾನು ಟೈಲರಿಂಗ್ ಮಾಡುತ್ತಿದ್ದ ಬಗ್ಗೆ ಯಾವುದೇ ಲೆಕ್ಕ ಪತ್ರವನ್ನು ಇಟ್ಟಿರುವುದಿಲ್ಲ. ಎಷ್ಟು ಹಣ ಉಳಿಸಿದ್ದ ಬಗ್ಗೆ ಲೆಕ್ಕ ಪತ್ರ ಇದೆಯೇ ಎಂದರೆ ಸಾಕ್ಷಿಯು ಏನು ಉಳಿಸಲು ಆಗುತ್ತಿರಲಿಲ್ಲ ಎಂದು ನುಡಿಯುತ್ತಾರೆ. ಬಂದ ಆದಾಯ ನನ್ನ ಹೆಂಡತಿ-ಮಕ್ಕಳನ್ನು ಸಾಕಲು ಆಗುತ್ತಿತ್ತು ಎಂದರೆ ಸರಿ. ನನಗೆ ಟೈಲರಿಂಗ್ ನಿಂದ ಸಂಸಾರ ನಿಭಾಯಿಸುವುದನ್ನು ಹೊರತುಪಡಿಸಿ ಹೆಚ್ಚಿಗೆ ಆದಾಯ ಇರಲಿಲ್ಲ ಎಂದರೆ ಸರಿ. ನಾನು ಟೈಲರಿಂಗ್ ಬಿಟ್ಟು ಬೇರೆ ಏನು ವ್ಯವಹಾರ ಮಾಡುತ್ತಿರಲಿಲ್ಲ ಎಂದರೆ ಸರಿ. ದಿನಾಂಕಃ-10.11.1971 ನಮ್ಮ ತಂದೆ ತಮ್ಮ ಸ್ವಯಾರ್ಜಿತ ಸಂಪಾಧನೆಯಿಂದ ದಾವಾ ಐಟಂ ನಂ.4ನ್ನು ಖರೀದಿಸಿದ್ದಾರೆಂದರೆ ಸರಿ. ಅದರ ಅಳತೆ ಪೂರ್ವ ಃ ಪಶ್ಚಿಮ — 23 ಗಜ, ಉತ್ತರ ಃ ದಕ್ಷಿಣ — 5 ವರೆ ಗಜ ಎಂದರೆ ಸರಿ. ಸದರಿ ಆಸ್ತಿಯನ್ನು ಖರೀದಿಸಿದಾಗ ನಾವೆಲ್ಲರೂ ಅಲ್ಪವಯಿಗಳಾಗಿದ್ದೇವು ಎಂದರೆ ಸಾಕ್ಷಿಯು ನನ್ನನ್ನೂ ಬಿಟ್ಟು ಉಳಿದವರು ಅಲ್ಪವಯಿಗಳಾಗಿದ್ದರು ಎಂದು ನುಡಿಯುತ್ತಾರೆ. 1971 ರಲ್ಲಿ ನಾನು ಸಹಿ ಅಲ್ಪವಯಿಯಾಗಿದ್ದೆ ಎಂದರೆ ಸರಿ.

ನಮ್ಮ ತಂದೆ ಐಟಂ ನಂ.4 ಆಸ್ತಿಯಲ್ಲಿ 1ನೇ ಪ್ರತಿವಾದಿ ಹೆಸರಿಗೆ ದಿನಾಂಕಃ-20.8.2003 ರಂದು 20 ಇಂಟು 16 ವರೆ ಅಡಿ ಆಸ್ತಿಯನ್ನು ವಿಲ್ ಬರೆದಿದ್ದರು ಎಂದರೆ ನನಗೆ ಗೊತ್ತಿಲ್ಲ. ಸದರಿ ದಿನಾಂಕದಂದೇ ಅದೇ ವಿಲ್ ನಲ್ಲಿ 2ನೇ ಪ್ರತಿವಾದಿಗೂ ಸಹ 20 ಇಂಟು 16 ವರೆ ಅಡಿ ಆಸ್ತಿಯನ್ನು ವಿಲ್ ಮೂಲಕ ಬರೆದುಕೊಟ್ಟಿದ್ದಾರೆಂದರೆ ನನಗೆ ಗೊತ್ತಿಲ್ಲ. 2ನೇ ಪ್ರತಿವಾದಿಗೆ ನೀಡಿರುವ ಆಸ್ತಿಯು ಮೊದಲ ಅಂತಸ್ತಿನ ಕಟ್ಟಡ ಎಂದರೆ ನನಗೆ ಗೊತ್ತಿಲ್ಲ. ಅದೇ ವಿಲ್ ನಲ್ಲಿ 3ನೇ ಪ್ರತಿವಾದಿಗೆ ಅದೇ ದಿನಾಂಕದಂದು 49 ಇಂಟು 16 ವರೆ ಅಡಿ ಆಸ್ತಿಯನ್ನು ದಾವಾ ಐಟಂ ನಂ.4 ರಲ್ಲಿ ಬರೆದಿರುತ್ತಾರೆಂದರೆ ನನಗೆ

ಗೊತ್ತಿಲ್ಲ. ನಮ್ಮ ತಂದೆ ತೀರಿಕೊಂಡು ಸುಮಾರು 5-6 ವರ್ಷವಾಗಿರುತ್ತದೆ. ದಿನಾಂಕ ನನಗೆ ನೆನಪಿಲ್ಲ. ನಮ್ಮ ತಂದೆ 2009 ರಲ್ಲಿ ತೀರಿಹೋಗಿರುತ್ತಾರೆ. ನಮ್ಮ ತಂದೆ ತೀರಿಹೋಗುವ ಮುಂಚೆ ಆರೋಗ್ಯವಾಗಿ, ದೃಢಕಾಯರಾಗಿದ್ದರು ಎಂದರೆ ಸರಿ. ನಾನು ನಮ್ಮ ತಂದೆಯಿಂದ ಮದುವೆಯಾದಾಗಿನಿಂದಲೂ ಬೇರೆ ವಾಸ ಇದ್ದೇನೆ. ಸಾಕ್ಷಿ ಸ್ವತಃ ನುಡಿಯುವುದೇನೆಂದರೆ ಮದುವೆಯಾದ 2 ವರ್ಷದಿಂದಲೂ ಬೇರೆ ವಾಸ ಇರುತ್ತೇನೆ ಎಂದು ನುಡಿಯುತ್ತಾರೆ. ನಾನು ಮದುವೆಯಾಗಿ ಬೇರೆಯಾದ ನಂತರ ನಮ್ಮ ತಂದೆ ಪ್ರತಿವಾದಿಗಳ ಜೊತೆ ವಾಸವಾಗಿದ್ದರು ಎಂದರೆ ಸಾಕ್ಷಿಯು ನನ್ನ ಜೊತೆ ಹಾಗೂ ಅವರ ಜೊತೆ ವಾಸವಾಗಿದ್ದರು ಎಂದು ನುಡಿಯುತ್ತಾರೆ.

ನಮ್ಮ ಊರಿನಲ್ಲಿ 81 ಇಂಟು 16 ವರೆ ಅಡಿ ಆಸ್ತಿಯು ನನ್ನ ಹೆಸರಿಗೆ ಇರುತ್ತದೆ ಎಂದರೆ ಸುಳ್ಳು. ಈ ಮೇಲಿನ ಅಳತೆಯ ಆಸ್ತಿಯನ್ನು ನಮ್ಮ ತಂದೆ ನನಗೆ ವಿಲಕ್ ಮೂಲಕ ಬರೆದುಕೊಟ್ಟಿದ್ದಾರೆಂದರೆ ನನಗೆ ಗೊತ್ತಿಲ್ಲ. ನಮ್ಮ ತಂದೆ ನನಗೆ ವಿಲ್ ಮೂಲಕ ಒಂದು ಆಸ್ತಿಯನ್ನು ಕೊಟ್ಟಿದ್ದರೂ ಸಹ ನನಗೆ ಗೊತ್ತಿಲ್ಲವೆಂದು ಸುಳ್ಳು ಹೇಳುತ್ತಿದ್ದೇನೆಂದರೆ ಸರಿಯಲ್ಲ. ಪ್ರತಿವಾದಿ 1 ಮತ್ತು 2 ರವರು ತಮ್ಮ ಸ್ವಂತ ಸಂಪಾಧನೆಯಿಂದ ಬಂದ ಆದಾಯದಿಂದ ಐಟಂ ನಂ.2 ಆಸ್ತಿಯನ್ನು ದಿನಾಂಕಃ-18.01.2001 ರಂದು ಖರೀದಿಸಿರುತ್ತಾರೆಂದರೆ ಸುಳ್ಳು. ಅದೇ ರೀತಿ ಐಟಂ ನಂ.3 ನ್ನು ಸಹ ಪ್ರತಿವಾದಿ 1 ಮತ್ತು 2 ರವರು ದಿನಾಂಕಃ-03.03.1998 ಮತ್ತು ದಿನಾಂಕಃ-05.09.1998 ರಂದು ಜಂಟಿಯಾಗಿ ಖರೀದಿಸಿರುತ್ತಾರೆಂದರೆ ಸುಳ್ಳು. ದಾವಾ ಐಟಂ ನಂ.6 ದಿನಾಂಕಃ-10.08.1992ರಂದು ಪ್ರತಿವಾದಿ 1 ಮತ್ತು 2 ರವರು ತಮ್ಮ ಸ್ವಂತ ಆದಾಯದಿಂದ ಖರೀದಿಸಿದಂತಹ ಆಸ್ತಿಯಾಗಿರುತ್ತದೆ ಎಂದರೆ ಸುಳ್ಳು. ಆದ್ದರಿಂದ ದಾವಾ ಐಟಂ ನಂ. 2,

3 ಮತ್ತು 6 ಆಸ್ತಿಗಳು ಪ್ರತಿವಾದಿ 1 ಮತ್ತು 2 ರವರ ಸ್ವಯಾರ್ಜಿತ ಆಸ್ತಿಗಳಾಗಿರುತ್ತವೆ ಎಂದರೆ ಸುಳ್ಳು.

ಸಿ ಟಿ ರಾಮಚಂದ್ರರಾವ್ ರವರು ಅಂಗಡಿ ಇಟ್ಟುಕೊಂಡಿರುತ್ತಾರೆ. ಈಗ್ಗೆ 6-7 ವರ್ಷಗಳಿಂದ ಅಂಗಡಿ ಮಾಡಿಕೊಂಡಿರುತ್ತಾರೆ. 3ನೇ ಪ್ರತಿವಾದಿ ಸಿ ಟಿ ರಾಮಚಂದ್ರರಾವ್ ರವರು ದಿನಾಂಕಃ-09.04.2003 ರಂದು ತಮ್ಮ ಸ್ವಂತ ಆದಾಯದಿಂದ ದಾವಾ ಐಟಂ ನಂ.6 ಆಸ್ತಿಯನ್ನು ಖರೀದಿಸಿದ್ದಾರೆಂದರೆ ಸುಳ್ಳು. ದಾವಾ ಆಸ್ತಿಗಳು ಯಾವುದು ಸಹ ಒಟ್ಟು ಕುಟುಂಬದ ಮತ್ತು ಪಿತ್ರಾರ್ಜಿತ ಆಸ್ತಿ ಅಲ್ಲ ಎಂದರೆ ಸುಳ್ಳು. ದಾವಾ ಆಸ್ತಿಯಲ್ಲಿ ನನಗೆ ಯಾವುದೇ ಭಾಗಾಂಶ ಇರುವುದಿಲ್ಲ ಎಂದರೆ ಸುಳ್ಳು.

ಈ ದಾವೆಯನ್ನು ಸಲ್ಲಿಸುವ ಸಲುವಾಗಿ ನಿಪಿ.09 ರಿಂದ 19 ದಾಖಲೆಗಳನ್ನು ಸೃಷ್ಟಿ ಮಾಡಿ ಹಾಜರುಪಡಿಸಿದ್ದೇನೆಂದರೆ ಸರಿಯಲ್ಲ. ದಾವಾ ಆಸ್ತಿಗಳಲ್ಲಿ ನನಗೆ ಯಾವುದೇ ಹಕ್ಕು ಇಲ್ಲದೇ ಇದ್ದರೂ ಸಹ ಪ್ರತಿವಾದಿಗಳಿಗೆ ತೊಂದರೆ ಕೊಡುವ ಸಲುವಾಗಿ ಸುಳ್ಳು ದಾವೆಯನ್ನು ಸಲ್ಲಿಸಿದ್ದೇನೆಂದರೆ ಸರಿಯಲ್ಲ.

ಮರುವಿಚಾರಣೆ ಃ ಇಲ್ಲ.

(ನನ್ನ ಸಮಕ್ಷಮ ತೆ ನ್ಯಾ ಬೆ ಮಾಡಿಸಲಾಯಿತು)

ಓ ಹೇ ಕೇ ಸರಿ ಇದೆ

ಅಧಿಕ ಸಿವಿಲ್ ಜಡ್ಜ್ ಮತ್ತು
ಜೆಎಂಎಫ್‌ಸಿ, ಗುಬ್ಬಿ